'ಆಯ್ತು ಬರೀಲಿ ಬಿಡು ಮಗಳೆ. ಅವರ ಸಂತೋಷಕ್ಕೆ ನಾವ್ಯಾಕೆ ಅಡ್ಡಿ ಪಡಿಸ್ಬೇಕು' ಎಂದು ಸಂತೈಸಿದ್ದೆ.

'ಯಾರ್‍ಯಾರಿಗೋ ಏನೇನೋ ಅವಾರ್ಡ್ ಕೊಡ್ತಾರಂತೆ. ಎಷ್ಟು ತ್ಯಾಗ ಮಾಡಿದ್ದೀಯ ನೀನು. ನಿನಗ್ಯಾಕಪ್ಪ ಇಲ್ಲ' ಮತ್ತೆ ಕೇಳಿದ್ದಳು. ನಾನು ಉತ್ತರಿಸದೆ ಸುಮ್ಮನಾಗಿದ್ದೆ.

'ಕುವೆಂಪು ಹೇಳಿದಂಗೆ ನಾವೆಲ್ಲ ಕಲ್ಪವೃಕ್ಷಕ್ಕೆ ಕೈ ಚಾಚಿದ್ವಿ. ಆದ್ರೆ ಅದು ಇವತ್ತಿಗೂ ಮರೀಚಿಕೆಯಾಗೀನೆ ಉಳಿದುಬಿಟ್ಟಿದೆ. ನಾವೇನು ಮಾಡೋಕಾಗುತ್ತೆ ಹೇಳು? ಆದ್ರೂ ಸಮುದಾಯದ ಒಳಿತಿಗೇಂತ ಸೆಣಸೋವಾಗ ವೈಯಕ್ತಿಕ ಪ್ರತಿಫಲಕ್ಕೆ ಆಸೆ ಪಟ್ಟರೆ ಹೋರಾಟಕ್ಕೆ ಘನತೆ ಇರುತ್ತೇನಯ್ಯ ಅಫ್ಜಲ್?' ಎಂದೆ.

'ಖಂಡಿತಾ ಇರೋದಿಲ್ಲಣ್ಣ. ನೀವು ಹೇಳಿದ್ದು ಸರಿ' ಎಂದ ಅಫ್ಜಲ್. ಆಮೇಲೆ ಮತ್ತೇನೋ ನೆನಪಾದಂತೆ, 'ಅಣ್ಣ ಒಂದೆರಡು ತಿಂಗಳ ಹಿಂದೆ ನೀವು ಟೀವೀಲಿ ಬಂದಿದ್ರಿ ಅಲ್ವೇನಣ್ಣ?' ಎಂದ.

'ಬಂದಿದ್ದೆ ಕಣಪ್ಪ. ಅದ್ಯಾವುದೋ ಚಾನೆಲ್ಲಿನೋರು ರಾಜ್ಯೋತ್ಸವದ ದಿನ ಕರೆಸ್ಕೊಂಡಿದ್ರು. ಹಳೆಯ ಬಟ್ಟೆ ಹಾಕ್ಕೊಂಡಿದ್ದೆನಲ್ಲ. ನನ್ನನ್ನು ಚಾನೆಲ್ಲಿನ ವಾಚ್ಮನ್ ಏನಂದುಕೊಂಡನೋ ಒಳಕ್ಕೇ ಬಿಡಲಿಲ್ಲ. ವಾಪಸ್ಸು ಹೊರಟಿದ್ದೆ. ಚಿದಾನಂದಮೂರ್ತಿ ನನ್ನನ್ನು ನೋಡಿ ಒಳಕ್ಕೆ ಕರ್ಕೊಂಡೋದ್ರು. ಹೇಗಿದ್ದೋರು ನೀವು ಹೀಗಾಗಿಬಿಟ್ಟಿದ್ದೀರಲ್ಲ ಅಂತ ನನ್ನ ಕುಂಟು ಕಾಲು ನೋಡ್ತಾ ತುಂಬ ನೊಂದುಕೊಂಡ್ರು. ಅವರದೂ ಒಂದು ಸಂಘಟನೆ ಇತ್ತಲ್ಲ. ಈಗ ಎಲ್ಲ ಸಂಘಟನೆಗಳೂ ತಣ್ಣಗಾಗ್ಬಿಟ್ಟಿವೆ ಅನ್ಸುತ್ತೆ. ಅಲ್ಲಯ್ಯ ಅಫ್ಜಲ್ ಇವಕ್ಕೆಲ್ಲ ಏನಾಗಿದೆ ಇವತ್ತು? ಆ ಕೃಷ್ಣಪ್ಪನೋರು, ನಂಜುಂಡಸ್ವಾಮಿ ಇವ್ರೆಲ್ಲ ಸಿದ್ಧಾಂತಾನ ಜನ ಹಿತದ ಜೊತೆಗೆ ಎಷ್ಟೊಂದು ಅದ್ಭುತವಾಗಿ ಬೆಸೀತಿದ್ರು ಅಂತೀಯ? ನಾವೆಲ್ಲ ಬೇರೆ ಬೇರೆ ಚಳವಳೀಲಿ ಇದ್ರೂ ಒಬ್ಬರಿಗೊಬ್ಬರು ಹೆಗಲು ಕೊಡ್ತಿದ್ವಿ. ಒಟ್ಟಿಗೇ ಗೆಲ್ತಾ ಇದ್ವಿ. ನಿನಗೆ ನೆನಪಿದೆಯಲ್ಲ? ಬೂಸಾ ಚಳವಳಿ ತುಂಬಾ ಬಿಸಿಯೇರಿದ್ದಾಗ ನಾನು ಬಸವಲಿಂಗಪ್ಪನ ಪರ ದೃಢವಾಗಿ ನಿಂತಿದ್ದೆ. ಯಾರೂ ನನ್ನನ್ನ ಅದರ ಬಗ್ಗೆ ಆಕ್ಷೇಪಿಸಲಿಲ್ಲ. ಪ್ರತಿಯೊಬ್ಬರ ಅಭಿಪ್ರಾಯಕ್ಕೂ ಬೆಲೆ ಇತ್ತು ನೋಡು ಆ ಕಾಲದಲ್ಲಿ. ಅವ್ರೆಲ್ಲ ಇವತ್ತು ಇರ್ಬೇಕಾಗಿತ್ತು ಅಫ್ಜಲ್' ಎನ್ನುತ್ತ ನಾಯಕರು ನಿಟ್ಟುಸಿರುಬಿಟ್ಟರು.

'ಅಣ್ಣ ಅದ್ಯಾವುದೋ ಟೀವಿ ಕಾರ್ಯಕ್ರಮದ ಬಗ್ಗೆ ಹೇಳ್ತಿದ್ರಿ' ಎಂದು ನೆನಪಿಸಿದ ಅಫ್ಜಲ್.

'ಅದರ ಬಗ್ಗೆ ಹೇಳದೇ ಇರೋದೇ ವಾಸಿ ಸುಮ್ನಿರು. ತಿಳ್ಕೊಂಡ್ರೆ ಬೇಸರ ಆಗ್ತದೆ. ಅದರಲ್ಲೊಬ್ಬ ನಿರೂಪಕ 'ಪಾಪ ನೀವಿಷ್ಟು ಬಡವರ ತರಾ ಕಾಣ್ತಿದ್ದೀರಿ. ನಿಮ್ಮ ಕಾಲದಲ್ಲಿ ನಿಮಗೆ ಒಳ್ಳೇ ಹೆಸರಿತ್ತಂತಲ್ಲ. ಒಂದಷ್ಟು ದುಡ್ಡು ಕಾಸು ಮಾಡ್ಕೋಬಾರದಾಗಿತ್ತ ಯಜಮಾನ್ರೆ? ಅಥ್ವಾ ಚೆನ್ನಾಗಿ ಆಸ್ತಿ ಮಾಡ್ಕೊಂಡು ಏನೂ ಇಲ್ಲಾಂತ ನಾಟಕ ಆಡ್ತಿದ್ದೀರಾ ಹೇಗೆ?' ಅಂತಾನೆ ಕಣಯ್ಯ ಅಫ್ಜಲ್.

'ಲಂಕೇಶರಂಥಾ ಲಂಕೇಶರೇ ನಮ್ಮ ಬಗ್ಗೆ ಹೀಗೆಲ್ಲ ಮಾತಾಡ್ತಿರಲಿಲ್ಲ. ಅವ್ರು ನಮ್ಮನ್ನ ಏನೆಲ್ಲ ಖಂಡಿಸಲಿ. ನಮ್ಮ ಬದ್ಧತೇನ ಯಾವತ್ತೂ ಅನುಮಾನಿಸಲಿಲ್ಲ. ಅವರ ಆಫೀಸಿಗೇನಾದ್ರೂ ಹೋದ್ರೆ ಎಷ್ಟು ಪ್ರೀತಿಯಿಂದ ನಡೆಸಿಕೊಳ್ತೋರು ಗೊತ್ತೇನಯ್ಯ ಅಫ್ಜಲ್? ಅಂಥಾ ಧೀಮಂತರನ್ನೆಲ್ಲ ಇವತ್ತು ನೋಡಲಾದರೂ ಆಗುತ್ತ?' ಎಂದೆ.

'ಹೌದು ಕಣಣ್ಣ ನೀವು ಹೇಳಿದ್ದು ನಿಜ' ಎಂದ ಅಫ್ಜಲ್.

ಅಫ್ಜಲ್ ಊರಿಗೆ ಹೋಗುತ್ತೇನೆಂದು ಹೇಳಿ ಹೋದ ಮೇಲೆ ಹಾಗೇ ಕಾಲು ಚಾಚಿ